

# ಶಾಂತಾ-ವಿಜಯರಾಘವನ್: ದುಡಿವ ಹಾದಿಯಲಿ ಜೊತೆ ಜೊತೆಯಲಿ

ತಂದೆಯ ವಿರೋಧದ ನಡುವೆ 1960ರಲ್ಲಿ 'ಭಾರತೀಯ ವಿಜ್ಞಾನ ಸಂಸ್ಥೆ'ಗೆ ಸೇರಿಕೊಂಡ ಶಾಂತಾ ಅಲ್ಲಿಂದ ಎಂಜಿನಿಯರ್ ಆಗಿ ಹೊರಬಂದಾಗ ಅವರ ಬಾಳಿನಲ್ಲಷ್ಟೇ ಹೊಸ ಅಧ್ಯಾಯ ಆರಂಭವಾಗಿರಲಿಲ್ಲ; ಅದು ಭಾರತೀಯ ಹೆಣ್ಣುಮಕ್ಕಳ ಮಹತ್ವಾಕಾಂಕ್ಷೆಯ ಮಾರ್ಗದ ಮೈಲಿಗಲ್ಲೂ ಆಗಿತ್ತು. 'ಬಿ.ಇ.ಎಲ್' ಸಂಸ್ಥೆಯಲ್ಲಿ ಉದ್ಯೋಗ ಆರಂಭಿಸಿದ ಶಾಂತಾ ಅವರ ಪ್ರತಿ ಹೆಜ್ಜೆಯೂ ಸಾಹಸದಿಂದ ಕೂಡಿತ್ತು ಹಾಗೂ ಹೊಸ ಇತಿಹಾಸ ಬರೆಯುವಂತಿತ್ತು. ಉದ್ಯೋಗದ ಸ್ಥಳದಲ್ಲಿ ಲಿಂಗ ತಾರತಮ್ಯ ಎದುರಿಸಬೇಕಾದರೂ ಅವರು ಧೃತಿಗೆಡಲಿಲ್ಲ. ಗಂಡ ವಿಜಯರಾಘವನ್ ಅವರೊಂದಿಗೆ ತಮ್ಮದೇ ಆದ 'ಮೈಕ್ರಾನಿಕ್ ಡಿವೈಸಸ್' ಸಂಸ್ಥೆ ಕಟ್ಟಿದರು. ಶಾಂತಾ ಹಾಗೂ ವಿಜಯರಾಘವನ್ ಕಂಪನಿಯೊಂದನ್ನು ಸ್ಥಾಪಿಸಿ ಜೊತೆಯಾಗಿ ದುಡಿದ ಕರ್ನಾಟಕದ ಪ್ರಥಮ ಎಂಜಿನಿಯರ್ ದಂಪತಿ. ಸೆಪ್ಟೆಂಬರ್ 15ರ 'ಎಂಜಿನಿಯರರ ದಿನ'ದ ಸಂದರ್ಭದಲ್ಲಿ ಪ್ರಕಟಗೊಳ್ಳುತ್ತಿರುವ ಈ ಬರಹ ದಾಂಪತ್ಯಗೀತೆಯಂತೆಯೂ, ಸಾಹಸಿ ಮಹಿಳೆಯ ಜೀವನವೃತ್ತಾಂತದ ತುಣುಕಿನಂತಿದೆ. ಶಾಂತಾ ಅವರ ಜೀವನಗಾಥೆ ಅಚ್ಚರಿ ಹುಟ್ಟಿಸುವಂತಿದೆ, ಈ ಕಾಲದ ಜಾಣೆಯರಿಗೆ ಸ್ಫೂರ್ತಿ ನೀಡುವಂತಿದೆ.

■ ನೇಮಿಚಂದ್ರ